“ಅರೇ, ನಾವು ಯಾರ ಮನೆಗೆ ಬಂದಿರೋದು?” ಒಬ್ಬಾತ ಬಾಯಿ ಬಿಟ್ಟು ಕೇಳಿದ್ದ, ಕಣ್ಣು ಮಿಟುಕಿಸುತ್ತಾ.

“ಯಾರ ಮನೆಗಾದ್ರೇನು? ತಿಂಡಿ ಬೇಕಾದೋರು ಒಳಗೆ ಬನ್ನೀಪ್ಪಾ...”

ಬಾಳೆಲೆ ಮೇಲೆ ಹಬೆಯಾಡುತ್ತಿದ್ದ ಉಪ್ಪಿಟ್ಟು, ಕೇಸರಿಭಾತು. “ಗಂಡು ನೋಡೋಕೆ ಬಂದಿದೀವಿ ಅನ್ನಿಸ್ತಿದೆ” ತಮಾಷೆ ಮಾಡಿದ್ದಳು ಮತ್ತೊಬ್ಬಳು. ರೋಹಿಣಿ ಚಂದ್ರುವಿನ ಕಡೆ ನೋಡಿದರೆ ಅವನ ದೃಷ್ಟಿ ಇವಳ ಕಡೆಗಿತ್ತು.

★★★

ಮುಂದಿನದು ಪ್ರೇಮಕತೆಯೊಂದರ ಸುಖಾಂತ್ಯ. ಮೊಬೈಲ್ ಯುಗ ಬಂದಿರಲಿಲ್ಲ. ಪತ್ರಮುಖೇನ ವ್ಯವಹಾರ. ಬೀಳ್ಕೊಡುಗೆಯ ಹೊತ್ತಿನಲ್ಲಿ ಎಲ್ಲರಿಂದ ವಿಳಾಸ ಪಡೆದು ತನ್ನ ಡೈರಿಯಲ್ಲಿ ಕಾಪಿಟ್ಟುಕೊಂಡಿದ್ದ ಚಂದ್ರು ವಾರ ಕಳೆಯುವುದರಲ್ಲಿ ರೋಹಿಣಿಗೆ ಪತ್ರ ಬರೆದಿದ್ದ. ತಮ್ಮೂರಿಗೆ ಬಂದು ತಮ್ಮ ಕಿಂಚಿತ್ ಆತಿಥ್ಯ ಸ್ವೀಕರಿಸಿದ್ದಕ್ಕೆ ಕೃತಜ್ಞತೆ ಹೇಳಿದ್ದ. ಅಮ್ಮ ಇವಳ ಸರಳತೆಯನ್ನು ಇಷ್ಟಪಟ್ಟಿದ್ದಾಗಿ ತಿಳಿಸಿದ್ದ. ಸಮ್ಮೇಳನದಲ್ಲಿ ಇವಳು ವಾಚಿಸಿದ ಕವನ ಇನ್ನೂ ಕಿವಿಗಳಲ್ಲಿ ಗುಂಯ್ಗುಡುತ್ತಿರುವುದಾಗಿ ತಿಳಿಸುತ್ತಾ ಸಾಕ್ಷಿಯೆಂಬಂತೆ ಅಂದು ಅವಳು ಓದಿದ ಅವಳ ಸ್ವರಚಿತ ಕವನದ ನಾಲ್ಕು ಸಾಲುಗಳನ್ನು ಉದ್ಧರಿಸಿದ್ದ. ಕೊನೆಯಲ್ಲಿ ಅವನು ಬರೆದ ವಾಕ್ಯಗಳು ಇವಳ ಮೈಯಲ್ಲಿ ಪುಲಕದ ಅಲೆಗಳನ್ನೆಬ್ಬಿಸಿದ್ದುವು. ‘ಹಾಡುವ ಕೋಗಿಲೆ, ಕುಣಿವ ನವಿಲು, ಅಂಗಳದುದ್ದಕ್ಕೂ ಜಿಗಿದು ಓಡುವ ಎಳೆಗರು, ಸೂಜಿ ಬಿದ್ದರೂ ಕೇಳುವಂತಾ ದಿವ್ಯ ಮೌನ, ತಣ್ಣನೆ ಗಾಳಿ, ಹುಣ್ಣಿಮೆ ಬೆಳಕು ಇವನ್ನೆಲ್ಲಾ ಮನಸೋಕ್ತ ಅನುಭವಿಸಬೇಕಾದರೆ ಮತ್ತೊಮ್ಮೆ ಬನ್ನಿ. ಸುಸ್ವಾಗತ’ ಎನ್ನುವ ಆತ್ಮೀಯ ಆಹ್ವಾನ. ಅವನು ಹೇಳಿದಷ್ಟು ಮಾತ್ರವೇ? ಊಟದೊಳಗಿನ ಮರದ ಮಣೆಗಳು, ಬಾಳೆಲೆಯ ನರುಗಂಪು

